ಕರ್ನಾಟಕ ಸರ್ಕಾರ

ಸಂಖ್ಯೆ: PWD 381 ಆಕೋ-3/06 ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 10.11.2006.

## ಸುತ್ತೋಲೆ

ವಿಷಯ : ಪ್ರಕೃತಿ ವಿಕೋಪ ಸಂದರ್ಭಗಳು ಮತ್ತು ಸರ್ಕಾರವು ಘೋಷಿಸಿದ ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಹಾಗೂ ಜೀವಹಾನಿ ಮತ್ತು ಆಸ್ತಿ ನಷ್ಟ ಉಂಟಾದ ಸಂದರ್ಭದಲ್ಲಿ ಪಾರದರ್ಶಕತೆ ಕಾಯ್ದೆ ಅನ್ವಯಿಸದಿರುವ ಬಗ್ಗೆ ಸ್ಪಷ್ಟೀಕರಣ.

ಉಲ್ಲೇಖ : ಸುತ್ತೋಲೆ ಸಂ: ಲೋಇ 542 ಆಕೋ-3/02, ದಿ: 13.12.02.

-----

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಕಲಂ 4(ಎ) ಉಪಬಂಧದತ್ತ ಗಮನ ಸೆಳೆಯಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದ ಕಲಂ 4(ಎ) ಪ್ರಕಾರ "ಪ್ರಕೃತಿ ವಿಕೋಪಗಳ ಅಥವಾ ಸರ್ಕಾರವು ಘೋಷಿಸಿದ ತುರ್ತು ಪರಿಸ್ಥಿತಿಯ ಅವಧಿಯಲ್ಲಿ" ಕಾಯ್ದೆ ಅನ್ವಯಿಸುವಿಕೆಗೆ ಅಪವಾದದ ಅವಕಾಶ ನೀಡಲಾಗಿದೆ. ಈ ಅವಕಾಶದ ಬಗ್ಗೆ ಇಲಾಖೆಗಳಿಗೆ ಸರಿಯಾದ ಮಾಹಿತಿ ಇರದೆ ಅಭಾವ ಪರಿಹಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಮೇಲೆ ಉಲ್ಲೇಖದ ದಿ: 13.12.2002 ರ ಸರ್ಕಾರಿ ಸುತ್ತೋಲೆಯಲ್ಲಿ ಸ್ಪಷ್ಟೀಕರಣ ನೀಡಲಾಗಿದೆ. ಆದರೆ "ಸರ್ಕಾರವು ಘೋಷಿಸಿದ ತುರ್ತು ಪರಿಸ್ಥಿತಿ ಅವಧಿಯಲ್ಲಿ" ಈ ಕಾಯ್ದೆ ಅನ್ವಯಿಸುವ ಅಪವಾದದ ಅವಕಾಶವನ್ನು ಬಳಸುವ ಸಮಯದಲ್ಲಿ ಯಾವ ತುರ್ತು ಪರಿಸ್ಥಿತಿಯನ್ನು ಘೋಷಿಸುವುದು ಸೂಕ್ತವೆಂಬುದರ ಬಗ್ಗೆ ಸರ್ಕಾರವು ವಿವರವಾಗಿ ಪರಿಶೀಲಿಸಿ, ಸಂಬಂಧಪಟ್ಟ ಇಲಾಖೆಯೇ ಅಂತಹ ಪರಿಸ್ಥಿತಿಯನ್ನು "ತುರ್ತು ಪರಿಸ್ಥಿತಿ ಅವಧಿಯೆಂದು" ಘೋಷಿಸುವುದು ಸೂಕ್ತ ಎಂಬ ಅಭಿಪ್ರಾಯಕ್ಕೆ ಬಂದಿದ್ದು, ಈ ಬಗ್ಗೆ ಗೊಂದಲ ನಿವಾರಣೆಗೆ ಸರ್ಕಾರ ಮುಂದಾಗಿ ಈ ಕೆಳಕಂಡಂತೆ ಸ್ಪಷ್ಟೀಕರಿಸಲಾಗಿದೆ.

5962

ಮೇಲೆ ಹೇಳಿದ ಸನ್ನಿವೇಶದಲ್ಲಿ ಯಾವುದೇ ಪ್ರಕರಣ ಅಥವಾ ಕಾಮಗಾರಿಯು ಒಂದೇ ತೆರನಾದ ವಿಶೇಷ ಸಂದರ್ಭಗಳಲ್ಲಿ ಜೀವಹಾನಿ ಹಾಗೂ ಗಂಭೀರವಾದ ಆಸ್ತಿನಷ್ಟ ಆಗುತ್ತದೆ ಎಂದು ಗೋಚರಿಸಿ ದಾಗ ಅಥವಾ ಗ್ರಹಿಕೆಗೆ ಬಂದಾಗ ಮತ್ತು ಇಂತಹವು ಪ್ರಕೃತಿ ವಿಕೋಪ ಮತ್ತು ತುರ್ತು ಪರಿಸ್ಥಿತಿಯನ್ನೇ ಹೋಲುವಂತಿದ್ದು, ಇಂತಹ ಕಾಮಗಾರಿಗಳನ್ನು ಆಯಾ ಇಲಾಖೆಗಳೇ ಮೊದಲಿಗೆ ಕಾಯ್ದೆಯ ಕಲಂ 4(ಎ) ರಡಿ 'ತುರ್ತು ಪರಿಸ್ಥಿತಿ ಅವಧಿ' ಎಂದು ಘೋಷಿಸಿ ಆನಂತರ ನಿಯಮಗಳ ಹಾಗೂ ಜಾರಿಯಲ್ಲಿರುವ ಆದೇಶಗಳನ್ನು ಪಾಲಿಸಿ, ವಿಳಂಬ ಮಾಡದೆ ಕೈಗೆತ್ತಿಕೊಂಡು ಪೂರ್ಣಗೊಳಿಸಲು ಕ್ರಮ ಜರುಗಿಸಬಹುದೆಂದು ಸೂಚಿಸಲಾಗಿದೆ, ಹಾಗೂ ಸಂಬಂಧಿಸಿದ ಇಲಾಖೆಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು ಅಧಿನಿಯಮ 4(ಎ) ನಂತೆ ಆದೇಶ ಹೊರಡಿಸಲು ಸಮರ್ಥರಿರುತ್ತಾರೆ. ಈ ರೀತಿಯ 'ತುರ್ತು ಪರಿಸ್ಥಿತಿ ಅವಧಿ' ಎಂದು ಇಲಾಖೆಗಳು ಹೊರಡಿಸಿದ ಅಧಿಸೂಚನೆಗಳನ್ನು ತಪ್ಪದೆ ಆರ್ಥಿಕ ಇಲಾಖೆಯ ಸಂಗ್ರಹಣಾ ಕೋಶಕ್ಕೆ ಮಾಹಿತಿಗಾಗಿ ಕಳುಹಿಸತಕ್ಕದ್ದು. ಈ ದಿಸೆಯಲ್ಲಿ ಯಾವುದೇ ಕಾರಣಕ್ಕೂ ಬೇರೆ ಯಾವುದೇ ಕಾಮಗಾರಿಗಳಿಗಾಗಲಿ ಹಾಗೂ ಬಜೆಟ್‌ನಲ್ಲಿ ಒದಗಿಸಿದ ಸಾಮಾನ್ಯ ಕಾಮಗಾರಿಗಳಿಗೆ ಮತ್ತು ಇತರ ವೆಚ್ಚಗಳಿಗೆ ಅನ್ವಯಿಸುವಂತಿಲ್ಲ. ಈ ಸೂಚನೆಗಳನ್ನು ತಮ್ಮ ಇಲಾಖೆ ಅಧೀನಕ್ಕೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳ ಗಮನಕ್ಕೆ ತಂದು ಕ್ರಮ ಜರುಗಿಸಲು ತಿಳಿಸಲಾಗಿದೆ.

(ಎನ್. ಗೋಕುಲ್‌ರಾಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರ್ಥಿಕ ಇಲಾಖೆ

<u>ಇವರಿಗೆ:</u>

1) ಅಪರ ಮುಖ್ಯ ಕಾರ್ಯದರ್ಶಿಗಳು.
2) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ.
3) ವಿಭಾಗಾಧಿಕಾರಿಗಳು : ಜಿಲ್ಲಾಧಿಕಾರಿಗಳು.
4) ಎಲ್ಲಾ ಇಲಾಖಾ ಮುಖ್ಯಸ್ಥರು.
5) ಜಿಲ್ಲಾ ಪಂಚಾಯಿತಿಯ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.